
# ಈಸ್ಟರ್ ಐಲ್ಯಾಂಡ್

## ಅಪ್ಪಟ ಜೇನುತುಪ್ಪದ ಖನಿ



ಹಸಿರು ಹಬ್ಬ

ಪರಿಸರ ದಿನದ ವಿಶೇಷ

**'ಈಸ್ಟರ್ ಐಲ್ಯಾಂಡ್' ಪುರಾತನ ಪ್ರತಿಮೆಗಳಿಗೆ ಮಾತ್ರವಲ್ಲ, ಪರಿಶುದ್ಧ ಜೇನುತುಪ್ಪಕ್ಕೂ ಹೆಸರುವಾಸಿ. ವರ್ಷವಿಡೀ ವಸಂತಕಾಲ, ಪುರಾತನ ಬೇಸಾಯ ಪದ್ಧತಿ, ಜನರ ಸರಳ ಜೀವನಶೈಲಿ, ಜೇನ್ನೊಣಗಳ ಸಮೃದ್ಧಿ – ಪರಿಸರವೊಂದರ ಆರೋಗ್ಯಕ್ಕೆ ಇನ್ನೇನು ಬೇಕು?**

■ ಪೃಥ್ವಿರಾಜ್

ಆಗ್ನೇಯ ಪೆಸಿಫಿಕ್ ಮಹಾಸಮುದ್ರದಲ್ಲಿನ ಒಂದು ಸುಂದರ ದ್ವೀಪ 'ಈಸ್ಟರ್ ಐಲ್ಯಾಂಡ್'. ಪ್ರಪಂಚದ ಒಂದು ಮೂಲೆಗೆಸೆದಂತಿರುವ ಈ ನಡುಗಡ್ಡೆ, ದಕ್ಷಿಣ ಅಮೆರಿಕ ಖಂಡದ ಚಿಲಿ ದೇಶದ ಸನಿಹವಿದೆ.

ಈ ದ್ವೀಪ ಪ್ರದೇಶ ಚಿಲಿಯ ವಿಶೇಷ ಆಡಳಿತ ಪ್ರದೇಶವಾಗಿ ಮಾನ್ಯತೆ ಪಡೆದಿದೆ. 2017ರ ಅಂಕಿ ಅಂಶಗಳ ಪ್ರಕಾರ 7,750 ಜನರಷ್ಟೇ ಇಲ್ಲಿ ವಾಸಿಸುತ್ತಿದ್ದಾರೆ. ಇದು ದಕ್ಷಿಣ ಚಿಲಿಯಿಂದ ಸುಮಾರು 3,700 ಕಿ.ಮೀ ಹಾಗೂ ಪೂರ್ವ ತಹಿತಿಯಿಂದ 4,023 ಕಿ.ಮೀ. ದೂರದಲ್ಲಿದೆ. ಹೀಗಾಗಿ ಇದನ್ನು ವಿಶ್ವದ ಸುರಕ್ಷಿತ ದ್ವೀಪ ಪ್ರದೇಶಗಳಲ್ಲಿ ಒಂದಾಗಿ ಪರಿಗಣಿಸಲಾಗಿದೆ.

ಡಚ್ ಅಡ್ಮಿರಲ್ ಜಾಕೋಬ್ ರೊಗ್ವೀನ್ ಈ ದ್ವೀಪಕ್ಕೆ ಭೇಟಿ ನೀಡಿದ ಮೊದಲ ಯೂರೋಪಿಯನ್. ಈತ 1722ರ ಏಪ್ರಿಲ್ 5ರ ಈಸ್ಟರ್‌ನಂದು ಇಲ್ಲಿಗೆ ಭೇಟಿ ನೀಡಿ ಇದಕ್ಕೆ 'ಈಸ್ಟರ್ ಐಲ್ಯಾಂಡ್' ಎಂದು ಹೆಸರಿಡಲಾಗಿದೆ.

ಸುಂದರ ಕಡಲ ಕಿನಾರೆಯೊಂದಿಗೆ, 'ಮೋಯ್' ಪ್ರತಿಮೆಗಳಿಗೆ ಹೆಸರಾಗಿರುವ ಈ ದ್ವೀಪದ ಪ್ರಕೃತಿ ಸೌಂದರ್ಯ ಮಾತ್ರವಲ್ಲ, ಇಲ್ಲಿನ ಮತ್ತೂ ಒಂದು ವಿಶೇಷ ಜಗದ ಗಮನವನ್ನು ತನ್ನೆಡೆಗೆ ಸೆಳೆಯುತ್ತಿದೆ. ಅದೇ, ಇಲ್ಲಿನ ಜೇನುತುಪ್ಪ. ಈ ಪ್ರದೇಶದಲ್ಲಿ ನೈಸರ್ಗಿಕವಾಗಿ ದೊರೆಯುತ್ತಿರುವ ಜೇನುತುಪ್ಪ ವಿಶ್ವದಲ್ಲೇ ಅತ್ಯಂತ ಗುಣಮಟ್ಟದ ಜೇನುತುಪ್ಪ ಎಂದು ಕರೆಸಿಕೊಂಡಿದೆ. ಈಸ್ಟರ್ ಐಲ್ಯಾಂಡ್ ಪ್ರದೇಶದಲ್ಲಿ ಮಾತ್ರ ಅತ್ಯಂತ ಗುಣಮಟ್ಟದ ಜೇನುತುಪ್ಪ ದೊರೆಯುತ್ತದೆ ಎಂದು ಕೆಲವು ಸಂಶೋಧನೆಗಳು ಕೂಡ ಹೇಳಿವೆ.

ಈ ಅಪ್ಪಟ ಜೇನುತುಪ್ಪದ ಹಿಂದೆ ಏನೆಲ್ಲಾ ಕಾರಣವಿರಬಹುದು?

ವಿಶ್ವದ ಹಲವು ಪ್ರದೇಶಗಳಲ್ಲಿ, ಉತ್ತಮ ಇಳುವರಿ ಹಾಗೂ ಹೆಚ್ಚು ಲಾಭ ಪಡೆಯಲು ಗಿಡಗಳಿಗೆ ರಾಸಾಯನಿಕ ಸಿಂಪಡಿಸಲಾಗುತ್ತಿದೆ. ಹೀಗೆ ರಾಸಾಯನಿಕ ಸಿಂಪಡಿಸಿದ ಗಿಡದಲ್ಲಿ ಬಿಡುವ ಹೂಗಳ ರಾಸಾಯನಿಕಯುಕ್ತ ಮಕರಂದವನ್ನೇ ಜೇನುನೊಣಗಳೂ ಹೀರುತ್ತಿವೆ. ಇದಷ್ಟೇ ಅಲ್ಲದೆ, ವಾತಾವರಣದಲ್ಲಾಗುತ್ತಿರುವ ಮಾರಕ ಬದಲಾವಣೆಗಳು, ಹೊಸದಾಗಿ ಹುಟ್ಟಿಕೊಂಡಿರುವ ವೈರಸ್‌ಗಳೂ ಜೇನುನೊಣಗಳ ಆರೋಗ್ಯದ ಮೇಲೆ ಪ್ರಭಾವ ಬೀರುತ್ತಿವೆಯಂತೆ.

ಆದರೆ ಇಂತಹ ಯಾವ ಅಪಾಯವೂ ಇಲ್ಲದ